ತೊಗರಿ ಬೆಳೆಗೆ ಬೆಂಬಲಿತ ಬೆಲೆ.

157(277) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ತೊಗರಿ ಬೆಳೆಯನ್ನು ಎಷ್ಟು ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ;

ಆ) ಕಳೆದ ನಾಲ್ಕು ವರ್ಷಗಳಿಂದ ವರ್ಷವಾರು ಎಷ್ಟು ಟನ್ ತೊಗರಿ ಬೆಳೆಯಾಗಿದೆ;

ಇ) ಇತ್ತೀಚಿನ ವರ್ಷಗಳಲ್ಲಿ ತೊಗರಿ ಬೆಳೆಗೆ ಬೆಂಬಲಿತ ಬೆಲೆ ಸಿಗದೆ ಬೆಳೆಗಾರರು ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ತೊಗರಿ ಬೆಳೆಗೆ ಯೋಗ್ಯ ಬೆಳೆ ಸಿಗುವಂತಾಗಲು ತೊಗರಿ ಮಂಡಳಿ ರಚಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಉ) ಇದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ರಾಜ್ಯದಲ್ಲಿ ತೊಗರಿ ಬೆಳೆಯನ್ನು ಸುಮಾರು 4.00 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ.

ಆ) ಕಳೆದ ನಾಲ್ಕು ವರ್ಷಗಳಿಂದ ತೊಗರಿ ಉತ್ಪಾದನೆ ಕೆಳಕಂಡಂತಿದೆ.

1994-95	1.19 ಲಕ್ಷ ಟನ್
1995-96	2.02 ಲಕ್ಷ ಟನ್
1996-97	2.29 ಲಕ್ಷ ಟನ್
1997-98	0.95 ಲಕ್ಷ ಟನ್ (ಅಂದಾಜು)

ಇ) ಇಲ್ಲ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.